## ಪ್ರಬಂಧ

ರೈಲು ಪ್ರಯಾಣದ ಅನುಭವ ಎನ್ನುವಾಗ ಒಂದು ಘಟನೆ ನೆನಪಾಗುತ್ತಿದೆ. ಅದು ನಾನು ನನ್ನ ಮಾವ, ಅತ್ತೆ ಜೊತೆ ಮಂಗಳೂರಿನಿಂದ ಕೋಲ್ಕೊತ್ತಕ್ಕೆ ರೈಲಿನಲ್ಲಿ ಹೋದ ಸಂದರ್ಭ. ಮಾವ, ಅತ್ತೆಗೆ ಹೊರಗಿನ ತಿಂಡಿ-ಊಟ ಅಷ್ಟಾಗಿ ಸೇರುವುದಿಲ್ಲ. ಅನಿವಾರ್ಯವಾದರೆ ಮಾತ್ರ ತಿನ್ನುತ್ತಾರೆ. ಹಾಗಾಗಿ ಅತ್ತೆ ರೈಲಿನಲ್ಲಿ ತಿನ್ನಲೆಂದು ಎರಡು ದಿನಕ್ಕಾಗುವಷ್ಟು ನೀರಿನ ಬದಲು ಹಾಲಿನಲ್ಲೇ ಗೋಧಿ ಹಿಟ್ಟು ಕಲಸಿ ಮೆತ್ತನೆಯ ಚಪಾತಿ ಮಾಡಿದ್ದರು. ಬೆಳಗ್ಗೆ ನಾಲ್ಕು ಗಂಟೆಗೇ ಎದ್ದು ಶ್ರಮ ವಹಿಸಿ ಬಾಳೆ



ಎಲೆಯಲ್ಲಿ ಹೊಯ್ದು ತಯಾರಿಸುವ ಒಂದು ಬಗೆಯ ಹೂವಿನಂಥ ಇಡ್ಲಿ ಮಾಡಿದ್ದರು. ಚಪಾತಿ ಮತ್ತು ಇಡ್ಲಿಯನ್ನು ಒಂದು ಬಟ್ಟೆ ಚೀಲದಲ್ಲಿ ಕಟ್ಟಿ ರೈಲಿನಲ್ಲಿ ನಾವು ಕುಳಿತುಕೊಳ್ಳುವ ಸೀಟಿನ ಅಡಿಯಲ್ಲಿ ಇಟ್ಟೆವು. ಬೆಳಗ್ಗೆ ವಡಾ, ಇಡ್ಲಿ, ಪಲಾವು ಮಾರುವವರು ಬಂದರು. ನಾವು 'ಬೇಡ' ಎಂದೆವು. ಒಂದೊಂದು ಟೀ ಅಷ್ಟೇ ತೆಗೆದುಕೊಂಡೆವು. ತಿಂಡಿ ತಿನ್ನಲೆಂದು ನಾವು ತಂದ ಚೀಲವನ್ನು ಬಿಚ್ಚಿದೆವು. ನೋಡುತ್ತೇವೆ! ಇಡ್ಲಿ, ಚಪಾತಿ ಎಲ್ಲವೂ ತುಂಡು ತುಂಡಾಗಿತ್ತು! ಇದು ಇಲಿ ಮಾಡಿದ ಕೆಲಸ ಎಂದು ಗೊತ್ತಾಯಿತು. ಛೆ! ಕಾಲಡಿಯಲ್ಲಿ ಇಡುವ ಬದಲು ತಲೆ ಬದಿಯಲ್ಲಾದರೂ ಇಟ್ಟಿದ್ದರೆ ಹೀಗೆ ಆಗುತ್ತಿರಲಿಲ್ಲ ಎಂದು ಅತ್ತೆ ಪೇಚಾಡಿಕೊಂಡರು. ಅಂದಿನಿಂದ ನಾನು ರೈಲಿನಲ್ಲಿ ತಿನ್ನುವ ವಸ್ತುಗಳನ್ನು ಚಿನ್ನದ ಒಡವೆಯಂತೆ ಬಳಿಯಲ್ಲೇ ಇಟ್ಟುಕೊಳ್ಳುತ್ತೇನೆ.

ಇನ್ನೊಮ್ಮೆ ಹೀಗಾಯಿತು. ಅದು ನಾನು ಮಂಗಳೂರಿನಿಂದ ಮುಂಬಯಿಗೆ ಹೋಗುವ ರೈಲಿನಲ್ಲಿ ನಡೆದ ಘಟನೆ. ನನ್ನ ಪಕ್ಕ ಮೂವತ್ತರ ಆಸುಪಾಸಿನ ಹೆಣ್ಣೊಬ್ಬಳು ಕುಳಿತಿದ್ದಳು. ಅವಳ ಬಟ್ಟೆಬರೆ ನೋಡಿದರೆ ಅವಳೊಬ್ಬಳು ಹೈಫೈ ಹೆಣ್ಣು ಎಂದು ಯಾರಾದರೂ ಹೇಳಬಹುದಿತ್ತು. ಕನ್ನಡ ಬಂದರೂ ಇಂಗ್ಲಿಷ್‌ನಲ್ಲೇ ಮಾತಾಡುತ್ತಿದ್ದಳು. ಸಾಮಾನ್ಯ ಉಡುಗೆ ತೊಟ್ಟು, ಶುದ್ಧ ಕನ್ನಡದಲ್ಲಿ ಮಾತಾಡುವ ನನ್ನನ್ನು ನಿಕೃಷ್ಟವಾಗಿ ಕಾಣುತ್ತಿದ್ದಳು. ರಾತ್ರಿ ಒಂಬತ್ತರ ಸಮಯವಿರಬಹುದು. ಟಿಕೆಟ್ ಚೆಕ್ ಮಾಡಲು ಟಿ.ಸಿ ಬಂದರು. ಅವಳಾಗಲೇ ಮೇಲಿನ ಬರ್ತ್‌ಗೆ ಹೋಗಿ ನಿದ್ರೆ ಮಾಡಿದ್ದಳು ಅಥವಾ ನಿದ್ರೆ ಬಂದಂತೆ ಮಲಗಿದ್ದಳು. ನನ್ನ ಟಿಕೆಟ್ ನೋಡಿದ ಮೇಲೆ ಟಿ.ಸಿ ಅವಳ ಟಿಕೆಟ್ ಕೇಳಲು ಅವಳನ್ನು ಮುಟ್ಟಿ ಎಬ್ಬಿಸಿದರು. ಅವಳಲ್ಲಿ ಟಿಕೆಟ್ ತೋರಿಸುವಂತೆ ಕೇಳಿದರು.

ಅವಳಲ್ಲಿ ಟಿಕೆಟ್ ಇರಲಿಲ್ಲ. ಅಷ್ಟಕ್ಕೂ ಅವಳು ಟಿಕೆಟ್ ಮಾಡಿಸಿಯೇ ಇರಲಿಲ್ಲ. 'ಟಿಕೆಟ್ ಇಲ್ಲದಿದ್ದರೆ ಟಿಕೆಟ್ಟಿನ ದುಡ್ಡು ಕೊಡಿ' ಎಂದು ಟಿ.ಸಿ ಜೋರು ಮಾಡಿದರು. ಅವಳ ಹತ್ತಿರ 100 ರೂಪಾಯಿ ಅಷ್ಟೇ ಇತ್ತು. ಇಳಿದುಹೋಗುವಂತೆ ಟಿ.ಸಿ. ಆಜ್ಞಾಪಿಸಿದರು. ಅವಳು ಇಳಿಯದೆ ಅಳಲು ಶುರುಮಾಡಿದಳು. ನನಗೆ ಪಾಪ ಅನಿಸಿ ಅವಳ ದುಡ್ಡನ್ನು ನನ್ನ ಕೈಯಿಂದ ಟಿ.ಸಿಗೆ ಕೊಟ್ಟೆ. ಮತ್ತೇನು ಮಾಡುವುದು ಹೇಳಿ.

ಅದಿರಲಿ, ಒಮ್ಮೆ ನಾನು ಮೈಸೂರಿನಿಂದ ಧಾರವಾಡಕ್ಕೆ ಹೋಗುವ ಸಂದರ್ಭ. ರೈಲು ಹೊರಡುವ ಸಮಯ ಸಾಯಂಕಾಲ 6 ಗಂಟೆಗೆ ಇದ್ದಿತು. ನನಗೆ ಬಸ್ಸು ತಪ್ಪಿ ರೈಲ್ವೇ ಸ್ಟೇಷನ್ ತಲುಪುವಾಗ 6 ಗಂಟೆಗೆ ಕೆಲವೇ ನಿಮಿಷ ಬಾಕಿ ಇತ್ತು. ನಾನು ಓಡುತ್ತಾ ನನ್ನ ಕಂಪಾರ್ಟ್‌ಮೆಂಟ್ ಹಿಡಿಯುವಾಗ ನನ್ನ ಹಿಂದಿನಿಂದ 23-24ರ ವಯಸ್ಸು ಇರಬಹುದಾದ ಚೆಲುವೆಯೊಬ್ಬಳು ಧಾವಿಸಿ ಬರುತ್ತಿದ್ದಳು. 'ಧಾರವಾಡಕ್ಕೆ ಹೋಗುವವರಾ? ಹತ್ತಿ ನನ್ನೊಂದಿಗೆ. ರೈಲು ಈಗ ಹೊರಡುತ್ತದೆ' ಎಂದೆ. ಅವಳು 'ಹೌದು, ಧಾರವಾಡಕ್ಕೇ ನಾನು ಹೋಗುವುದು ಆದರೆ ಇಲ್ಲಿ ಹತ್ತುವುದಲ್ಲ. ಡ್ರೈವರ್ ಸೀಟು ಇರುವಲ್ಲಿ ಹತ್ತುವುದು' ಎಂದಳು. ಆಮೇಲೆ ಅವಳು ಆ ರೈಲಿನ ಚಾಲಕಿ ಎಂದು ಗೊತ್ತಾಯಿತು. ಅಷ್ಟು ಸಣ್ಣ